ಶ್ರೀ ಹೆಚ್. ಸಿದ್ದವೀರಪ್ಪ.—ಇಲ್ಲ, ಖಂಡಿತ ಇಲ್ಲ. 1956 ರಲ್ಲಿ ನಾನು ಮನೆಗೆ ಹೋದೆ. ರಾಮರಾಜ್ಯದಲ್ಲಿ ಇದೆಲ್ಲಾ ಆಯಿತು, ರಾವಣ ರಾಜ್ಯದಲ್ಲಲ್ಲ.

ಒಬ್ಬ ಮಾನ್ಯ ಸದಸ್ಯರು.—ಸಿದ್ದವೀರಪ್ಪನವರದು ರಾವಣ ರಾಜ್ಯವಾಗಿತ್ತು.

Sri H. SIDDAVEERAPPA.—Ravana is better than Rama. He is a pure dravidian.

Mr. SPEAKER.—Why not Savithri ?

ಶ್ರೀ ಮಹದೇವ ಜಿ. ಬಣಕಾರ.—ಮಿಲ್ಲುಗಳಿಗೆ ಹಣ ಕೊಡುತ್ತಿದ್ದಾರೆ, ಚಿತ್ರದುರ್ಗದ ಮಿಲ್ಲಿನಲ್ಲಿ ನಷ್ಟವಾಯಿತು, ಗುಲ್ಬರ್ಗ ಮಿಲ್ಲಿನಲ್ಲಿ 2 ಕೋಟಿ ರೂಪಾಯಿ ನಷ್ಟವಾಯ್ತು. ಯಾವ ಮಿಲ್ಲಿಗೆ ನೀವು ಕೈಹಾಕಿದರೂ ನಷ್ಟವಾಗುತ್ತದೆ. ಕೋಆಪರೇಟಿವ್ ಸೊಸೈಟಿಗೆ ಬೇಕಾದರೆ ವಾಪಸು ಕೊಟ್ಟು ಕೆ.ಸಿ.ಟಿ. ಮಿಲ್ಲನ್ನು ಬಂದು ಮಾಡುವ ಯೋಚನೆ ಇದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಅದು ಹಿಂದಿನ ಕಥೆ. ಈಗಿರುವಹಾಗೆ ಈ ಮಿಲ್ಲಿನ ವೀವಿಂಗ್ ಸೆಕ್ಷನ್ ಬಂದಮೇಲೆ 1967ನೇ ಮಾರ್ಚಿಯಲ್ಲಿ 16 ಸಾವಿರ ರೂಪಾಯಿಗಳ ಲಾಭ ಪಡೆದಿದೆ, ಏಪ್ರಿಲ್ 67ರಲ್ಲಿ 24 ಸಾವಿರ ರೂಪಾಯಿ, ಮೇ 67ರಲ್ಲಿ 8 ಸಾವಿರ ರೂಪಾಯಿ—ಹೀಗೆ ಲಾಭ ಪಡೆದು ಸುಧಾರಣೆಯಾಗಿದೆ

ಶ್ರೀ ಕೆ. ಎಚ್. ಪಾಟೀಲ್—ಇತರ ಕಡೆಗಳಲ್ಲಿ ಸೆಕ್ಷನ್ 54ರ ಪ್ರಕಾರ ಕ್ರಮ ಕೈಕೊಂಡು ಈ ದಿವಸ ಇಂಥ ದುರವಸ್ಥೆಯಲ್ಲಿರುವ ದುರಾಡಳಿತವಿರುವ ಈ ಕೋಆಪರೇಟಿವ್ ಮಿಲ್ಲಿನ ಬಗ್ಗೆ ಏಕೆ 54ನೆಯ ಸೆಕ್ಷನ್ನಿನ ಒಂದು ಅಂಶವನ್ನೂ ಕೂಡ ರಾಗು ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಪಿ. ಎಂ. ನಾಡಗೌಡ.—ವಿಚಾರ ಮಾಡಿದರೆ ಸಹಕಾರಿ ಸಂಘಗಳು ಅಭಿವೃದ್ಧಿಯಾಗ ಬೇಕೆಂಬ ಭಾವನೆಯಿಂದ ಅಲ್ಲಿ ಕಾಂಗ್ರೆಸ್ಸಿಗರು ಅಥವಾ ಇತರರು ಯಾರಿದ್ದರೂ ಬೇಧಮಾಡಿಲ್ಲ. ಅದು ಮಾನ್ಯ ಸದಸ್ಯರಿಗೇ ಗೊತ್ತಿದೆ.

ಶ್ರೀ ಎಸ್ ಆರ್. ಬೊಮ್ಮಾಯಿ.—ವೀವಿಂಗ್ ಸೆಕ್ಷನ್ ಬಂದಾದಮೇಲೆ ಸುಮಾರು 2 ಸಾವಿರ ಕೂಲಿಗಾರರು ನಿರುದ್ಯೋಗಿಗಳಾಗಿದ್ದಾರೆ. ಅವರಿಂದ ಉದ್ಯೋಗ ಒದಗಿಸಬೇಕೆಂದು ಅರ್ಜಿ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಬಂದಿದೆ

## Pickup across Uppeneriana Halla near Arundi village.

157. Sri D. PARAMESHWARAPPA (Honnali).—

Will the Minister for Public Works be pleased to state :—

(*a*) whether any representation has been made by the villagers of Arundi, Honnali Taluk for the construction of a pick-up across Uppeneriana Halla near Arundi village ;

(*b*) whether any estimate has been prepared and sanctioned ;

(*c*) whether provision in the Budget has been made for this work ?

*A*.—ALUR HANUMANTHAPPA (Deputy Minister for Minor Irrigation).

(*a*) Yes.

(*b*) Estimate prepared but not sanctioned.

(*c*) No.

Answers as printed ; but answer to (*b*) may be corrected as work has been approved recently.

Sri D. PARAMESHWARAPPA.—May I know the cost of the estimate ?

† Sri ALUR HANUMANTHAPPA.—The cost is Rs. 80,000.

Sri D. PARAMESHWARAPPA.—In view of the importance given to minor irrigation, would you include it in the Budget estimates for the year 1967-68 ?

Sri ALUR HANUMANTHAPPA.—The work has already been approved.

## Industrial Estate at Sakleshpur

158. Sri K. P. CHIKKE GOWDA (Sakleshpur).—

Will the Chief Minister be pleased to state:—

(*a*) the reasons for the inordinate delay in establishing an "Industrial Estate" at Sakleshpur ;

(*b*) whether it is a fact that the same has been sanctioned long back to Sakleshpur ?

*A*.—Sri A. P. APPANNA (Deputy Minister for Industries).—

(*a*) Selection of suitable site for the Industrial Estate took some time. Transfer of Government land to the Industries Department now selected in S. No. 161 of Sakleshpur is being pursued,

(*b*) Yes.

ಶ್ರೀ ಕೆ. ಪಿ. ಚಿಕ್ಕೇಗೌಡ.—ಸಕಲೇಶಪುರಕ್ಕೆ ಕೈಗಾರಿಕಾ ಎಸ್ಟೇಟನ್ನು ಮಂಜೂರು ಮಾಡಿ ಎಷ್ಟು ವರ್ಷವಾಯ್ತು ?

ಶ್ರೀ ಎ. ಪಿ. ಅಪ್ಪಣ್ಣ.—19-9-62 ರಲ್ಲಿ ಮಂಜೂರು ಮಾಡಿದೆ.

ಶ್ರೀ ಕೆ. ಪಿ. ಚಿಕ್ಕೇಗೌಡ.—ಸರಕಾರದವರು ಜಮೀನನ್ನು ಕೈಗಾರಿಕಾ ಇಲಾಖೆಗೆ ವಹಿಸಲು ಇಷ್ಟು ವರ್ಷ ಬೇಕೇ ?

ಶ್ರೀ ಎ. ಪಿ. ಅಪ್ಪಣ್ಣ.—1962 ರಲ್ಲಿ ಹಿಂದು ಪ್ರೈವೇಟ್ ಲ್ಯಾಂಡ್ ಅಕ್ವೈರ್ ಮಾಡಬೇಕೆಂದು ತೀರ್ಮಾನಮಾಡಿ ಅಕ್ವಿಜಿಷನ್ ಆಗುತ್ತಿದ್ದಾಗ ಬೇಡವೆಂಬ ಅಭಿಪ್ರಾಯ ಬಂದಮೇಲೆ ಸರಕಾರಿ ಜಮೀನನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ.

ಶ್ರೀ ಕೆ. ಪಿ. ಚಿಕ್ಕೇಗೌಡ.—ಎಷ್ಟು ದಿವಸಗಳಲ್ಲಿ ಇದನ್ನು ಪ್ರಾರಂಭಿಸಲಾಗುವುದು ?

ಶ್ರೀ ಎ. ಪಿ. ಅಪ್ಪಣ್ಣ.— ಆದಷ್ಟು ಜಾಗ್ರತೆ ಇಲಾಖೆಗೆ ವಹಿಸಬೇಕೆಂದು ಈಗಾಗಲೇ ಡೆಪ್ಯುಟಿ ಕಮಿಷನರಿಗೆ ಬರೆದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಸೈಟು ಸೆಲೆಕ್ಟ್ ಮಾಡುವುದಕ್ಕೆ 5 ವರ್ಷವಾಯ್ತು, ಅದನ್ನು ಕೈಗಾರಿಕಾ ಇಲಾಖೆಗೆ ವರ್ಗಾಯಿಸಬೇಕಾಗಿದೆ. ಈ ಎಸ್ಟೇಟು ಅಸ್ತಿತ್ವಕ್ಕೆ ಬರಲು ಇನ್ನೂ ಎಷ್ಟು ಕಾಲ ಬೇಕು ?

ಶ್ರೀ ಎ. ಪಿ. ಅಪ್ಪಣ್ಣ.—ಅದನ್ನು ಈಗಲೇ ಹೇಳಲು ಸಾಧ್ಯವಿಲ್ಲ.